# ನಾಂದಿಪದ

## ಬುದ್ಧಿ-ಭಾವಗಳ ಸಮೀಕರಣ

'ಬುದ್ಧಿ ಭಾವಗಳ ವಿದ್ಯುದಾಲಿಂಗನ' ಎನ್ನುವ ಮಾತು 'ಮಯೂರ'ದ ಈ ಸಂಚಿಕೆಗೆ ಹೆಚ್ಚು ಅನ್ವಯಿಸುವಂತಿದೆ. ವರ್ಷದ ಕೊನೆಯ ಸಂಚಿಕೆಯೂ ಆದ ಈ ಸಂಕಲನ ಎಂದಿನಂತೆ ಸಮಕಾಲೀನ ಸಾಹಿತ್ಯದ ಒಲವು ಚೆಲುವುಗಳ ಅಭಿವ್ಯಕ್ತಿಯಂತಿದೆ. ಕನ್ನಡ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಹೊಸ ಹೊಳಹುಗಳನ್ನು ನೀಡುವಂತಿರುವ ವರ್ಷಾಂತ್ಯ ಸಂಚಿಕೆಯ ಬರಹಗಳಲ್ಲಿ ಸಂವಾದದ ಬೀಜಗಳೂ ಇರುವುದನ್ನು ಗುರ್ತಿಸಬಹುದು. ಹೊಸ ಚಿಂತನೆ ಚರ್ಚೆಗಳಿಗೆ 'ಮಯೂರ'ದ್ದು ತೆರೆದ ಮನ.

ಆಧುನಿಕ ಕನ್ನಡ ಸಾಹಿತ್ಯದ ಅತ್ಯುತ್ತಮ ಮನಸ್ಸುಗಳಲ್ಲೊಂದಾದ ಎಲ್.ಎಸ್. ಶೇಷಗಿರಿ ರಾವ್ ಅವರ ಜನ್ಮ ಶತಮಾನೋತ್ಸವ ವರ್ಷವಿದು. ಎಲ್‌ಎಸ್‌ಎಸ್ ಅವರ ಸಾಹಿತ್ಯ ಸಾಧನೆಯ ಅವಲೋಕನದ ರೂಪದಲ್ಲಿ ನೋಡಬಹುದಾದ ಈ ಸಂಚಿಕೆಯ ಬರಹ, ಹೊಸ ತಲೆಮಾರಿಗೆ ಕನ್ನಡದ ಬಹುಶ್ರುತ ವಿದ್ವಾಂಸರೊಬ್ಬರನ್ನು ಪರಿಚಯಿಸುವ ನಿಟ್ಟಿನಿಂದಲೂ ಮುಖ್ಯವಾದುದು. ಕನ್ನಡದ ಕ್ಲಾಸಿಕಲ್ ಹಾಗೂ ಕ್ಲಾಸಿಕ್ ಕೃತಿಗಳ ಇಂಗ್ಲಿಷ್ ಅನುವಾದ ಪರಂಪರೆಯ ಕುರಿತು ವಿಶ್ಲೇಷಿಸುವ ಬರಹ, ಅನುವಾದಗಳ ಹಿಂದಿನ ಸಾಂಸ್ಕೃತಿಕ ಒಲವು ನಿಲವು ಹಾಗೂ ರಾಜಕಾರಣದ ಕುರಿತು ಸಹೃದಯರ ಗಮನ ಸೆಳೆಯುವಂತಿದೆ. 'ಕನ್ನಡ ವಿವೇಕ ಪರಂಪರೆ'ಗೆ ಹೊಸ ಮಾತುಗಳನ್ನು ಕೂಡಿಸುವಂತಿರುವ ಹಿರಿಯ ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅವರ ಸಂದರ್ಶನ ಹಾಗೂ ವಚನಗಳ ಭಿನ್ನ ಓದುವಿಕೆಗೆ ಸಂಬಂಧಿಸಿದ ವಿಶ್ಲೇಷಣೆ ಪ್ರಸಕ್ತ ಸಂಚಿಕೆಯ ಮತ್ತೆರಡು ಗಮನಾರ್ಹ ಬರಹಗಳು.

ಈ ಹೊತ್ತಿನ ಗಮನಾರ್ಹ ಕಥೆ-ಕವಿತೆಗಳೊಂದಿಗೆ ಉತ್ತಮ ಪ್ರಬಂಧಗಳನ್ನೂ ನಾವು ಆಯ್ದು ತಂದಿದ್ದೇವೆ. ಭಿನ್ನ ಭಾವ-ಬಣ್ಣ-ರುಚಿಗಳ 'ಮಯೂರ'ದ ಸಂಚಿಕೆಗಳನ್ನು ಮತ್ತಷ್ಟು ಉತ್ತಮಗೊಳಿಸಲು ಸಹೃದಯರಿಂದ ರಚನಾತ್ಮಕ ಟೀಕೆ ಟಿಪ್ಪಣಿಗಳನ್ನು ನಿರೀಕ್ಷಿಸುತ್ತೇವೆ. ಸಹೃದಯರ ಸ್ಪಂದನ ಹಾಗೂ ಸಹಭಾಗಿತ್ವವಿಲ್ಲದೆ ಹೋದಲ್ಲಿ ಯಾವುದೇ ಸೃಜನಶೀಲ ಕಲಾಕೃತಿ ಆರ್ದ್ರತೆ ಹೊಂದಲಾರದು, ಜೀವಂತಿಕೆ ಪಡೆಯಲಾರದೆನ್ನುವುದು ನಮ್ಮ ನಂಬಿಕೆ.

**ಮಯೂರ ಬಳಗ**
editormy@mayura.co.in



ಕಲೆ: ಗುರು ರಾಘವೇಂದ್ರ